
ಪಿಪ್ಪೋ ಹಿಂತಿರುಗಿ ಬಂದು ಎನ್–19ನೇ ನಂಬರಿನ ಕೊಠಡಿ ಖಾಲಿ ಇದೆ ಎಂದು ಹೇಳಿದಾಗ ಲೀನಾ ಮಕ್ಕಳ ಥರಾ ಚಪ್ಪಾಳೆ ತಟ್ಟುತ್ತ ನಗತೊಡಗಿದಳು. ಅದೇ ಕೊಠಡಿಯಲ್ಲೇ ಅವಳು ಈಗ ಮತ್ತೆ ಇರುತ್ತಾಳೆ. ಅದೇ ವಸ್ತುಗಳು, ಅದೇ ಥರ ಸಜ್ಜುಗೊಳಿಸಿರುವ, ಕಾಡಿನ ಹತ್ತಿರ ಇರುವ ಅದೇ ಸುಂದರ ಚಿಕ್ಕ ಗೂಡು. ಅದೆಷ್ಟೊಂದು ಮಜಾ ಅನ್ನಿಸುತ್ತೆ!

ಬರ್ತೊಲಿನೋಗೆ... ಲಿನಾಳ ಸಂತೋಷದಲ್ಲಿ ಭಾಗಿಯಾಗಲು ಸಾಧ್ಯವಾಗಲಿಲ್ಲ ಎಂದು ಹೇಳಬೇಕಾಗಿಯೇ ಇಲ್ಲ.

"ಏನು ಈ ಕೊಠಡಿ ನಿಮಗೆ ಹಿಡಿಸಲಿಲ್ಲವೇನು" ಎಂದು ಲೀನಾ ಕೇಳಿದಳು.

"ಅದರಲ್ಲಿ ತಪ್ಪೇನಿದೆ. ನಿನಗೆ ಹಿಡಿಸಿದೆ ಅಂದರೆ ಆಯಿತು." ಎಂದು ಬರ್ತಲಿನೊ ವಿಷಾದದಿಂದ ನುಡಿದನು. ಅನಂತರ ಲೀನಾ ಬಟ್ಟೆ ಬದಲಿಸಲು ಕರ್ಟನ್ ಹಿಂದೆ ಹೋದಳು. ಅಲ್ಲೇ ಇದ್ದ ಮಂಚದ ಕಡೆ ನೋಡುತ್ತ ಬರ್ತೊಲಿನೊ ಇಲ್ಲೇ ಇದೇ ಹಾಸಿಗೆಯ ಮೇಲೆ ತನ್ನ ಪತ್ನಿ ಲೀನಾ ಅವಳ ಮೊದಲ ಪತಿಯೊಂದಿಗೆ ತನ್ನ ವಿವಾಹದ ಮೊದಲ ರಾತ್ರಿಯನ್ನು ಕಳೆದಿದ್ದಳಲ್ಲವೆ ಎಂದು ಯೋಚಿಸತೊಡಗಿದ... ಬಹು ದೂರದಲ್ಲಿದ್ದ ತನ್ನ ಹೆಂಡತಿಯ ಮನೆಯ ಗೋಡೆಯಮೇಲೆ ತೂಗುಹಾಕಿದ್ದ ಫೋಟೊದೊಳಗಿಂದ ಸಿನೋರ್ ತಾದ್ದೇಯಿಯ ಚಿತ್ರ ಅವನ ಕಣ್ಣೆದುರು ತೇಲಿಬಂತು – ಹಾಸ್ಯಭರಿತ ಮುಗುಳ್ನಗೆಯೊಂದಿಗೆ ತಾದ್ದೇಯಿ ಅವನಕಡೆ ನೋಡುತ್ತ ತಲೆಯಮೇಲಿನ ಹ್ಯಾಟ್ ತೆಗೆಯುತ್ತಿದ್ದಾರೆ.



ಹನಿಮೂನ್ ಸಮಯದಲ್ಲಿ ಅವರಿಬ್ಬರೂ ಆರು ವರ್ಷಗಳ ಹಿಂದೆ ಲೀನಾ ತನ್ನ 'ಅವರೊಂದಿಗೆ' ಹೋಗಿದ್ದಾಗಿನ ಕಾಲದ ಅದೇ ಹಾಸಿಗೆಯ ಮೇಲೆ ನಿದ್ರಿಸಿದರು. ಅದೇ ರೆಸ್ಟೊರೆಂಟಿನಲ್ಲಿ ಊಟ ಮಾಡಿದರು. ಅದೇ ಮಾಯಾ ಮಂತ್ರ, ಕಲಾಭವನಗಳು, ಅದೇ ಚರ್ಚುಗಳು, ಅವೇ ಎಲ್ಲ ಉದ್ಯಾನವನಗಳಲ್ಲಿ ಸಂಚರಿಸಿದರು.

ಬರ್ತೊಲಿನೊ ತುಂಬ ನಾಚಿಕೆ ಸ್ವಭಾವದ ಮನುಷ್ಯ. ಲೀನಾಳು ಹೆಜ್ಜೆ ಹೆಜ್ಜೆಗೂ ತನ್ನ ಮೊದಲ ಗಂಡನ ಅನುಭವ, ಅಭಿರುಚಿ, ಇಷ್ಟಾನಿಷ್ಟಗಳು ಇವನ್ನೆಲ್ಲ ಅನುಸರಿಸುತ್ತ ತಿರುಗಾಡುವುದು ತನಗೆ ಎಷ್ಟೊಂದು ಕೆಟ್ಟನಿಸುತ್ತಿದೆ ಎಂದು ಯಾವ ರೀತಿಯಲ್ಲೂ ಬಾಯಿಬಿಟ್ಟು ಹೇಳಿಕೊಳ್ಳಲು ಅವನಿಗೆ ಆಗಲೇ ಇಲ್ಲ. ತನ್ನ ಈ ವರ್ತನೆಯಿಂದ ತನ್ನ ತರುಣ ಪತಿ ಒಳಗಿಂದೊಳಗೇ ಅದೆಷ್ಟು ಮರ್ಮಾಘಾತಕ್ಕೆ ಒಳಗಾಗಿದ್ದಾನೆ ಎಂಬುದರ ಕಡೆಗೆ ಲೀನಾ ಕೂಡ ಲಕ್ಷ್ಯ ಕೊಡಲೇ ಇಲ್ಲ. ಅವಳು ಹದಿನೆಂಟು ವರ್ಷದವಳಿದ್ದಾಗ ಅವಳ ಮದುವೆ ನಡೆದಿತ್ತು. ಆಗ ಅವಳು ಹೆಚ್ಚು ಕಡಿಮೆ ಇನ್ನೂ ಚಿಕ್ಕಹುಡುಗಿ ಥರಾ. ಏನಂದರೆ ಏನೂ ಗೊತ್ತಾಗುತ್ತಿರಲಿಲ್ಲ. ಅರ್ಥವೂ ಆಗುತ್ತಿರಲಿಲ್ಲ. ಅದೇ ಒಳ್ಳೇ ಮನುಷ್ಯ ತಾದ್ದೇಯಿನೇ ಅವಳಿಗೆ ವಿದ್ಯಾ ಬುದ್ಧಿ ಕಲಿಸಿ ದೊಡ್ಡವಳನ್ನಾಗಿ ಮಾಡಿದ್ದ. ಲೀನಾಳಂತೂ ಅವಳ ಮೊದಲ ಗಂಡನ ಸೃಷ್ಟಿಯೇ ಆಗಿದ್ದಳು. ಅವಳ ಬಳಿ ಏನೆಲ್ಲ ಇದೆ, ಅದೆಲ್ಲವನ್ನೂ ಅವಳು 'ಅವರಿಂದ' ತಾನೆ ಪಡೆದಿರೋದು? ಎಷ್ಟರ ಮಟ್ಟಿಗೆ ಅಂದರೆ, 'ಅವರಿಂದ' ವಿಭಿನ್ನವಾಗಿ ಯೋಚನೆಮಾಡುವ ಇಲ್ಲವೆ ಅನುಭವಕ್ಕೆ ತಂದುಕೊಳ್ಳುವ ಸಾಮರ್ಥ್ಯವನ್ನೇ ಅವಳು ಕಳೆದುಕೊಂಡುಬಿಟ್ಟಿದ್ದಳು.